# ಆಹಾ ಸುದ್ದಿ!

★ ಸಸಿತೋಟ

ಪೆಟ್ ಹಾರ್ಸ್‌ಮನ್ ಪೂರ್ವ ಜರ್ಮನಿಯಲ್ಲಿರುವ ತನ್ನ ಸೈಕಲ್ ಅಂಗಡಿಯನ್ನು ಸಿಂಗರಿಸಿರುವ ಪರಿಯಿದು. 210 ಹಳೆಯ ಸೈಕಲ್‌ಗಳನ್ನು ಅಂಗಡಿ ಗೋಡೆಗೆ ಲಗತ್ತಿಸಿದ್ದಾನೆ. ಹಳೆಯ ಸೈಕಲ್‌ಗಳು.. ವಿಂಟೇಜ್ ಸಂಗ್ರಹಕ್ಕಾಯಿತು ಎಂದು ಖರೀದಿಸಲು ಹೋದರೆ ಅಂಗಡಿಯೊಳಗೆ ಸಾವಿರಾರು ಹೊಸ ಸೈಕಲ್‌ಗಳಿವೆ ಎಂದು ಕೈ ತೋರಿಸುತ್ತಾನಂತೆ. ಓ! ಹಳೆಯ ಸೈಕಲ್‌ಗಳ ಷಾಪಿರಬಹುದು ಎಂದು ಗಿರಾಕಿ ಮುಂದೆ ಸಾಗಿದರೆ ಆಗಲೂ 'ಬನ್ನಿ ಸ್ವಾಮಿ ಹೊಸ ಸೈಕಲ್‌ಗಳಿವೆ' ಎಂದು ಬೆನ್ನು ಹತ್ತುತ್ತಾನಂತೆ. ಸೈಕಲ್ ಮಾರಾಟದ ಬದಲು ಪುಕ್ಕಟೆ ಮನರಂಜನೆ ನೀಡುತ್ತಿದ್ದಾನೆ.



ಬೆಲ್ಜಿಯಂನ ಸೆಲೀನಾ ಸಂಗ್ರಹಿಸಿರುವ ಪಾಂಡಾ ಬೊಂಬೆಗಳ ಸಂಖ್ಯೆ 2200 ತಲುಪಿದೆಯಂತೆ. 1978ರಲ್ಲಿ ಲಾರಿ ಚಾಲಕನಾಗಿದ್ದ ಆಕೆಯ ಗಂಡ ಇಟಲಿಯಿಂದ ಉಡುಗೊರೆ ಎಂದು ತಂದು ಕೊಟ್ಟ ಪಾಂಡಾ ಬೊಂಬೆಯೇ ಆಕೆಯ ಈ ಸಂಗ್ರಹಕ್ಕೆ ಪ್ರೇರಣೆಯಂತೆ. ಸದ್ಯ ಬೊಂಬೆ ತಂದು ಕೊಟ್ಟೆ, ಜೀವಂತ ಪಾಂಡಾವನ್ನೋ ಅಥವಾ ಇನ್ನಾವುದೋ ದುಬಾರಿ ಉಡುಗೊರೆಯನ್ನೋ ತಂದು ಕೊಡಲಿಲ್ಲವಲ್ಲ ಎಂದು ಆಕೆಯ ಗಂಡ ನಿಟ್ಟುಸಿರುಬಿಡುತ್ತಿರಬಹುದು.



ಫ್ಲಾರಿಡಾದಲ್ಲಿರುವ ಸಣ್ಣ ಪಟ್ಟಣ ಹ್ಯಾಂಪ್ಟನ್ ಭ್ರಷ್ಟಾಚಾರದಿಂದಾಗಿ ಭೂಪಟದಿಂದಲೇ ಮಾಯವಾಗಲಿದೆಯಂತೆ. 447 ಜನಸಂಖ್ಯೆ ಹೊಂದಿರುವ ಪಟ್ಟಣದಲ್ಲಿ ಪ್ರತಿಯೊಬ್ಬರೂ ತಲಾ 31 ಪ್ರಕರಣಗಳನ್ನು ಎದುರಿಸುತ್ತಿದ್ದಾರಂತೆ. ಜನಪ್ರಿಯ ಯೋಜನೆಯಿಂದ 10 ಲಕ್ಷ ಡಾಲರ್ ಸಂಗ್ರಹಿಸಿದ್ದರೂ ಅದು ಯಾರ ಬಳಿ ಇದೆ ಎಂಬುದೇ ಗೊತ್ತಿಲ್ಲ. ತಲಾ 25 ಮಂದಿಗೊಬ್ಬರಂತೆ ಇರುವ ಪೊಲೀಸ್ ಅಧಿಕಾರಿಗಳು ಐಷಾರಾಮಿ ಕಾರಿನಲ್ಲಿ ಸುತ್ತಾಡುತ್ತಿದ್ದಾರಂತೆ. ತನಿಖೆ ನಡೆಯುತ್ತಿದ್ದು ಸಾಬೀತಾದರೆ ಪಟ್ಟಣದ ಪರವಾನಗಿ ರದ್ದು. ತನಿಖೆಯನ್ನು ಯಾರು ನಡೆಸುತ್ತಿದ್ದಾರೋ!

ಬೆಲ್ಜಿಯಂನ ವಿಲ್‌ಫ್ರೆಡ್ ಟೆಲೆನ್ ತನ್ನ ಮನೆಗೆ ಬಣ್ಣ ಬಳಿಯುವ ಹುಕ್ಕಿ ಬಂದು ಕಪ್ಪು, ಹಳದಿ, ಕೆಂಪು ಬಣ್ಣ ಬಳಿದೇ ಬಿಟ್ಟ. ಆ ಮೂಲಕ ದೇಶದ ಫುಟ್ಬಾಲ್ ತಂಡಕ್ಕೆ ತನ್ನ ಗೌರವ ತೋರಿಸಿಯೂ ಬಿಟ್ಟ. ಆದರೆ ಬಣ್ಣ ಹಾಗೂ ಗೌರವ ಎರಡನ್ನೂ ಬಿಡು ಎಂದಿದ್ದಾರಂತೆ ಸ್ಥಳೀಯ ಆಡಳಿತಗಾರರು. ಅಲ್ಲಿಯ ಕಾನೂನಿನ ಪ್ರಕಾರ ಆ ಮೂರೂ ಬಣ್ಣಗಳು ರಾಷ್ಟ್ರಧ್ವಜದಲ್ಲಿವೆ ಎಂದು ಬಳಿಯಬಾರದಂತೆ. ಎಲ್ಲರೂ ಮನೆಗೆ ಬಿಳಿ ಬಣ್ಣ ಬಳಿದು ಶಾಂತಿದೂತರಾಗಬೇಕಂತೆ. ಉಳಿದ ಬಣ್ಣಗಳು ಏನು ತಪ್ಪು ಮಾಡಿವೆ ಎಂದು ಇನ್ನೂ ಯಾರೂ ಕೋರ್ಟಿಗೆ ಹೋಗಿಲ್ಲವಂತೆ.



ಚೀನಾದ ವುಕ್ಸಿಯಲ್ಲಿ ಕಟ್ಟಿರುವ ಪಿಂಗಾಣಿ ಚಹದ ಬೋಗುಣಿಯಾಕಾರದ ಕಟ್ಟಡವಿದು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆಂದು ಕಟ್ಟಿದ್ದಾರಂತೆ. ಖ್ಯಾತ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ನಕಲಿ ಮಾಡಿ ಮಾಡಿ ಗೇಲಿಗೀಡಾಗಿರುವ ಚೀನಾ ಇದು ಮಾತ್ರ ಅಪ್ಪಟ ದೇಸಿ ಎಂದು ತೋರಿಸಲು ಮುಂದಾಗಿದೆಯಂತೆ.



ಹವ್ಯಾಸಿ ಚಿತ್ರ ನಿರ್ದೇಶಕ ಟಾಟಿಯ ಪಿಲ್ಲೈವಾ ತೆಗೆದಿರುವ ಮೂರು ನಿಮಿಷಗಳ 'ಫಸ್ಟ್ ಕಿಸ್' ಎಂಬ ಕಿರುಚಿತ್ರ ರಾತ್ರಿ ಬೆಳಗಾಗುವುದರಲ್ಲಿ ಹಿಟ್ ಆಗಿದೆ. 24 ಗಂಟೆಯಲ್ಲಿ 20 ಲಕ್ಷ ಮಂದಿ ಯೂ ಟ್ಯೂಬ್‌ನಲ್ಲಿ ವೀಕ್ಷಿಸಿದ್ದಾರಂತೆ. ಅಪರಿಚಿತರು ಪೆಕರು ಪೆಕರಾಗಿ ಮೊದಲ ಮುತ್ತನ್ನು ಹಂಚಿಕೊಳ್ಳುವ 20 ದೃಶ್ಯಗಳಿವೆಯಂತೆ. ಚೊಚ್ಚಲ ಕಿಸ್ಸಿಗರಿಗೆ ಪಾಠ ಹೇಳುವ ಚಿತ್ರವಂತೂ ಅಲ್ಲ ಬಿಡಿ.